ಈ ದಿನ ದಿನಾಂಕಃ 16-01-2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀಸವಾಲು ಪ್ರತಿವಾದಿಗಳ ಪರ ಶ್ರೀ ಕೆ ಜಿ ಎಸ್ ವಕೀಲರಿಂದಃ**

ನಾವು ದಾವೆಯನ್ನು ಒಟ್ಟು 8 ಜನರ ಮೇಲೆ ದಾಖಲಿಸಿದ್ದೇವೆ. ನಮ್ಮ ಅಜ್ಜನ ಆಸ್ತಿಯಲ್ಲಿ ಪಾಲು ಬೇಕೆಂದು ದಾವೆ ಸಲ್ಲಿಸಿದ್ದೇವೆ. ದಾವಾ ಸ್ವತ್ತುಗಳ ಕುರಿತಾಗಿ 2000 ನೇ ಸಾಲಿನಲ್ಲಿ ವಿಭಾಗವಾಗಿರುತ್ತದೆ. ದಾವಾ ಸ್ವತ್ತುಗಳಲ್ಲಿ ನಮಗೆ ಅರ್ಧ ಭಾಗವಿದೆ. ದಾವಾ ಸ್ವತ್ತಿನಲ್ಲಿ ನಾವು ಕೋರಿದ ಅರ್ದ ಹಿಸ್ಸೆಯ ಬೆಲೆ ದಾವೆ ಸಲ್ಲಿಸುವ ಕಾಲಕ್ಕೆ 50 ಲಕ್ಷ ರೂಗಳಿಗಿಂತ ಹೆಚ್ಚಾಗಿತ್ತು. ದಾವಾ ಸ್ವತ್ತಿನಲ್ಲಿ 25 ವರ್ಷಗಳಿಂದ ಪ್ರತಿವಾದಿ 1 ರಿಂದ 9 ನೇದ್ದವರು ಸ್ವಾದೀನಾನುಭವ ಹೊಂದಿದ್ದರು. 10ನೇ ಪ್ರತಿವಾದಿಗೆ 1 ರಿಂದ 9 ನೇ ಪ್ರತಿವಾದಿಗಳು ದಾವಾ ಸ್ವತ್ತಿನ ಪೈಕಿ 3ನೇ ಆಸ್ತಿಯ 31 ಗುಂಟೆ ಜಮೀನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಆ ಕ್ರಯಪತ್ರದ ಮೊಬಲಗು 11,70,000/- ರೂಗಳಾಗಿರುತ್ತವೆ ಎಂದರೆ ಸರಿ.

ಮುಂದುವರೆದ ಪಾಟೀಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.